# 'ಸೂರ್ಯನಿಗೆ ಸಾವ ನೋಡಲು ಬೇಸರವಿಲ್ಲ'; ಪ್ರತಿಮಾತ್ಮಕ ಬಂಡಾಯ ಮನೋಧರ್ಮದ ಕಾವ್ಯ

ಡಾ. ಮದಗೊಂಡ ಬಿರಾದಾರ
ಉಪನ್ಯಾಸಕರು
ಕನ್ನಡ ವಿಭಾಗ
ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು.

'ಸೂರ್ಯನಿಗೆ ಸಾವ ನೋಡಲು ಬೇಸರವಿಲ್ಲ' ಇದು ಚನ್ನಪ್ಪ ಕಟ್ಟಿಯವರ ನಾಲ್ಕನೇ ಕವನ ಸಂಕಲನವಾಗಿದೆ. ಕಾವ್ಯ, ಕತೆ, ಸಂಶೋಧನೆ, ಸಂಪಾದನೆ, ಅನುವಾದ, ಪ್ರಕಾಶನ ಮುಂತಾದ ಸಾಹಿತ್ಯ ಚಟುವಟಿಕೆಯಲ್ಲಿ ತೊಡಗಿಸಿಕೊಂಡ ಇವರು ಎಲ್ಲಾ ಪ್ರಕಾರದಲ್ಲಿಯೂ ಗಟ್ಟಿಯಾದ ಬರವಣಿಗೆಯನ್ನೇ ಮಾಡಿದ್ದಾರೆ. ಕಾವ್ಯ ಪ್ರಕಾರವಷ್ಟೇ ಗಮನಿಸಿದರೆ ಅವರು ಸುಮಾರು ೮೦ರ ದಶಕದಿಂದ ಗಂಭೀರವಾಗಿ ಕಾವ್ಯ ಕೃಷಿಯಲ್ಲಿ ತೊಡಗಿಸಿಕೊಂಡಿದ್ದರೆಂದು ಗೊತ್ತಾಗುತ್ತದೆ. ಈ ಹಿನ್ನೆಲೆಯಲ್ಲಿ ಸುಮಾರು ೩೦ರಿಂದ ೪೦ ವರ್ಷಗಳಿಂದ ಕಾವ್ಯ ಕಟ್ಟುವಲ್ಲಿ ಕ್ರಿಯಾಶೀಲರಾಗಿದ್ದರೆನ್ನುವುದು ಸ್ಪಷ್ಟವಾಗುತ್ತದೆ. ಮುಖ್ಯವಾಗಿ ಆಧುನಿಕ ಕನ್ನಡ ಸಾಹಿತ್ಯದಲ್ಲಿ ೮೦ರ ದಶಕವು ದಲಿತ ಬಂಡಾಯ ಸಾಹಿತ್ಯದ ಅಬ್ಬರದ ಕಾಲ. ಒಂದು ಸಾಹಿತ್ಯ ಘಟ್ಟದ ಹುಟ್ಟು ಮತ್ತು ಅವನತಿ ಆಯಾ ಕಾಲಮಾನದ ರಾಜಕೀಯ ಸಾಮಾಜಿಕ ಆರ್ಥಿಕವಲ್ಲದೇ ಹಲವು ಅಂಶಗಳನ್ನು ಪ್ರಭಾವಿಸಿರುತ್ತವೆ. ಹಾಗೆಯೇ ೭೦ರ ಕೊನೆಯ ಮತ್ತು ೮೦ರ ಮೊದಲ ದಶಕದ ಈ ಸಂಕೀರ್ಣ ಘಟ್ಟದಲ್ಲಿ ರಾಜಕೀಯ ಹಾಗೂ ಸಾಮಾಜಿಕ ಪಲ್ಲಟಗಳ ಜೊತೆಗೆ ದಲಿತ ಬಂಡಾಯ ಸಾಹಿತ್ಯ ಜನ್ಮ ತಳೆಯಿತು. ಇದಕ್ಕೆ ಸಾಹಿತ್ಯ ಹಾಗೂ ಸಾಂಸ್ಕೃತಿಕ ಕಾರಣವೂ ಇರುವುದನ್ನು ಮರೆಯುವಂತಿಲ್ಲ.

ದಲಿತ ಬಂಡಾಯ ಸಾಹಿತ್ಯ ಸಂದರ್ಭದಲ್ಲಿ ಕಾವ್ಯ ರಚನೆಯಲ್ಲಿ ತೊಡಗಿಸಿಕೊಂಡ ಚನ್ನಪ್ಪ ಕಟ್ಟಿಯವರ ಕಾವ್ಯವು ಬಂಡಾಯ ಮನೋಧರ್ಮವನ್ನು ಪ್ರತಿನಿಧಿಸುತ್ತದೆ. ಇದು ಅವರ ಎಲ್ಲಾ ಬಗೆಯ ಸೃಜನಶೀಲ ಬರವಣಿಗೆಯ ಸಂರಚನೆಗೂ ಅನ್ವಯಿಸುತ್ತದೆ. ಈ ಶತಮಾನದ ಮೊದಲ ದಶಕದಿಂದ ಅದನ್ನು ಮೀರುವ ಅಥವಾ ವಿಸ್ತರಿಸುವಲ್ಲಿ ಕ್ರಿಯಾಶೀಲರಾಗಿರುವುದ್ದನ್ನು ಅವರ ಒಟ್ಟು ಬರವಣಿಗೆಯ ಹಿನ್ನೆಲೆಯಲ್ಲಿ ಗಮನಿಸಬಹುದು.

'ಸೂರ್ಯನಿಗೆ ಸಾವ ನೋಡಲು ಬೇಸರವಿಲ್ಲ' ಕವನ ಸಂಕಲನದಲ್ಲಿ ಬಂಡಾಯ ಮನೋಧರ್ಮದ ಕವಿತೆಗಳಿವೆ. ಈ ಸಂಕಲನದುದ್ದಕ್ಕೂ ನವೋದಯದ ಪ್ರಮುಖ ಕವಿಗಳ ಕಾವ್ಯದ ಪ್ರಭಾವ ಅಲ್ಲಲ್ಲಿ ಕಾಣುತ್ತದೆ. ಇದು ಸಹಜ. ಒಂದು ಕಾಲದ ಅಭಿಜಾತ ಮನೋಧರ್ಮ ಬಹುತೇಕ ಎಲ್ಲಾ ಕಾಲದಲ್ಲೂ ಪ್ರವಹಿಸುತ್ತಿರುತ್ತದೆ. ಅನುರಣಿಸುತ್ತಿರುತ್ತದೆ. ಆದರೆ ಅದಕ್ಕೆ ಕವಿ ತಾನು ಬದುಕುತ್ತಿರುವ ವರ್ತಮಾನದ ಆಕೃತಿಯ ಮೂಲಕ ಸಂರಚಿಸಿಕೊಳ್ಳುವುದು ಬಹಳ ಮುಖ್ಯ. ಹಾಗೇ ಮಾಡಿದಾಗ ಮಾತ್ರ ಪರಂಪರೆಯನ್ನು ಇನ್ನಷ್ಟು ಕ್ರಿಯಾಶೀಲಗೊಳಿಸಿ ಮುಂಚಲನೆಗೆ ದಾರಿ ಮಾಡಿಕೊಡಲು ಸಾಧ್ಯ. ಒಟ್ಟು ಕನ್ನಡ ಸಾಹಿತ್ಯ ಚರಿತ್ರೆಯನ್ನು ಗಮನಿಸಿದರೆ ಈ ಮೇಲಿನ ಅಂಶಗಳು ಸ್ಪಷ್ಟವಾಗುತ್ತವೆ. ಆ ಬಗೆಯ ಕುರುಹುಗಳನ್ನು ಬಿಡಿ ಬಿಡಿಯಾಗಿ ಈ ಸಂಕಲನದಲ್ಲಿ ಕಾಣಲು ಸಾಧ್ಯವಿದೆ.

ಡಾ.ಆರ್.ಕೆ.ಕುಲಕರ್ಣಿಯವರು "ಸೃಜನಾತ್ಮಕ ಸಾಹಿತ್ಯ ರಚಿಸುವುದರೊಂದಿಗೆ ಸಾಹಿತ್ಯ ವಿಮರ್ಶಕರಾಗಿಯು ತಮ್ಮದೇ ಛಾಪು ಮೂಡಿಸಿರುವ ನಮ್ಮ ತಲೆಮಾರಿನ ಕನ್ನಡದ ಇಂದಿನ ಲೇಖಕರಲ್ಲಿ ಒಬ್ಬರಾಗಿರುವ ಡಾ. ಕಟ್ಟಿಯವರ ಕಾವ್ಯದಲ್ಲಿ ನವೋದಯದ ಜೀವನ ಪ್ರೀತಿ, ನವ್ಯದ ಪ್ರಾಶ್ನಿಕ ಬುದ್ಧಿ, ಬಂಡಾಯದ ಸಾತ್ವಿಕ ಕ್ರೋಧ

ಹಾಗೆಯೇ ಜಾನಪದ ಸೊಗಡು ಹುರಿಗೊಂಡಿವೆ",೧ "ಈ ಸಂಕಲನದಲ್ಲಿ ಕವಿಯ ಅನುಭವ ಮಾಗಿ, ದರ್ಶನ ವಿಸ್ತಾರಗೊಂಡು, ಕಾವ್ಯಾಭಿವ್ಯಕ್ತಿಯ ವಿಧಾನ ಮೊನಚು ಪಡೆದು ಅವರ ಕಾವ್ಯ ಇನ್ನೂ ಹೊಸ ಕ್ಷಿತಿಜದತ್ತ ಪಯಣಿಸುತ್ತಿರುವುದನ್ನು ನೋಡಬಹುದು"೨ ಎನ್ನುವ ಅಭಿಮತವು ವಸ್ತುನಿಷ್ಠವಾಗಿದೆ.

ಒಂದು ಕಾಲಘಟ್ಟದ ಸಾಹಿತಿಕ ಮನೋಧರ್ಮ ಯಾವ ಬಗೆಯದಾಗಿದ್ದರೂ ಕವಿಯ ಜೀವನಾನುಭವ ಮತ್ತು ಕ್ಲಾಸಿಕ್ ಅಧ್ಯಯನವು ಗಟ್ಟಿ ಮತ್ತು ಗಂಭೀರತೆಯದಾಗಿದ್ದರೆ ಕವಿಯ ಬರವಣಿಗೆಯಲ್ಲಿ ರೂಪುಗೊಳ್ಳುವ ತಾತ್ವಿಕತೆಯು ತನ್ನ ಕಾಲಮಾನದ ಓಘದಿಂದ ಬಿಡಿಸಿಕೊಂಡು ಸ್ವಂತಿಕೆಯ ಕಡೆಗೆ ಮುಖ ಮಾಡುತ್ತದೆ. ಹೀಗಾಗಿ ಈ ಸಂಕಲನವು ಕೇವಲ ಬಂಡಾಯ ಮನೋಧರ್ಮದೆಂದು ಭಾವಿಸಬೇಕಿಲ್ಲ. ಇಲ್ಲಿ ಕನ್ನಡದಷ್ಟೇ ಪಾಶ್ಚಿಮಾತ್ಯ ಸಾಹಿತ್ಯದ ಪ್ರಭಾವವಿದೆ. ಕನ್ನಡದ ಪ್ರಮುಖ ಧಾರೆಗಳಾದ ವಚನ, ದಾಸ, ತತ್ವಪದಗಳ ಅನುಭಾವದ ಜೊತೆಗೆ ಜನಪದ ಸಾಹಿತ್ಯದ ದಟ್ಟ ಪ್ರಭಾವ ಕಾಣಲು ಸಾಧ್ಯವಿದೆ. ಅದರಲ್ಲೂ ಉತ್ತರ ಕರ್ನಾಟಕದ ಅಮೋಘಸಿದ್ಧ ಜನಪದ ಮಹಾಕಾವ್ಯದ ಪ್ರಭಾವವಿರುವುದನ್ನು ಕಾಣಬಹುದು.

ಈ ಸಂಕಲನದ ಬಹುತೇಕ ಕವಿತೆಗಳು ಕಥನಾತ್ಮಕ ಮಾದರಿಯ ಗದ್ಯ ಕವಿತೆಗಳಂತಿವೆ. ಭಾಷೆ, ವಸ್ತು, ಲಯಗಾರಿಕೆಯಿಂದ ಗಮನ ಸೆಳೆಯುವ ಎಲ್ಲಾ ಗುಣಗಳು ಈ ಕವಿತೆಗಳಲ್ಲಿವೆ. ನವೋದಯ ಹಾಗೂ ವಚನಕಾರರ ಛಂದೋ ಮಾದರಿಯೂ ಇಲ್ಲಿ ಕಾಣಬಹುದು.

'ಸೂರ್ಯನಿಗೆ ಸಾವ ನೋಡಲು ಬೇಸರವಿಲ್ಲ' ಸಂಕಲನದ ಹೆಸರು ಪ್ರತಿಮಾತ್ಮಕ ಬಂಡಾಯವನ್ನೇ ಸೂಚಿಸುತ್ತದೆ. ಒಟ್ಟು ಇಲ್ಲಿಯ ಕವಿತೆಗಳು ಚರಿತ್ರೆ, ಪುರಾಣದೊಂದಿಗೆ ಮುಖಾಮುಖಿಯಾಗಿ ವರ್ತಮಾನದ ಸಂಕಟಕ್ಕೆ ಉತ್ತರಕಂಡುಕೊಳ್ಳಲು ಪ್ರಯತ್ನಿಸುವುದರೊಂದಿಗೆ ಭವಿಷ್ಯದ ಬಗೆಗೆ ಆಶಾಭಾವನೆಯನ್ನು ವ್ಯಕ್ತಪಡಿಸುತ್ತದೆ. ಪ್ರೀತಿ-ಪ್ರೇಮ, ಸಾಮಾಜಿಕ ಸ್ಥಿತ್ಯಂತರ, ಅರಾಜಕತೆ, ಭ್ರಷ್ಟಗೊಳ್ಳುತ್ತಿರುವ ಸಾಮಾಜಿಕ ವ್ಯವಸ್ಥೆ, ನೈತಿಕ ಅಧಃಪತನ ಹೀಗೆ ಹತ್ತಾರು ಅಂಶಗಳು ಗಮನ ಸೆಳೆಯುತ್ತವೆ.

'ನೋಯುವ ಹಲ್ಲಿಗೆ ನಾಲಿಗೆ ಮತ್ತೆ ಮತ್ತೆ ಹೊರಳುವಂತೆ', ವರ್ತಮಾನದ ಸಂಕಟಗಳಿಗೆ ಕವಿ, ಕಲಾವಿದರು ಪುರಾಣ ಚರಿತ್ರೆಗೆ ಮಾರುಹೋಗಿ ಅಲ್ಲಿಂದಲೇ ಉತ್ತರ ಕಂಡುಕೊಳ್ಳುವ ಪ್ರಯತ್ನ ಮಾಡುತ್ತಾರೆ. ಇದು ಅನಿವಾರ್ಯ ಕೂಡ. ಏಕೆಂದರೆ ವರ್ತಮಾನ ಯಾವಾಗಲೂ ಭಯಂಕರವಾಗಿಯೇ ಇರುತ್ತದೆ. ಅದನ್ನು ಎದುರಿಸುವ ಅಸ್ತ್ರಗಳು ಪುರಾಣ ಹಾಗೂ ಚರಿತ್ರಯಲ್ಲೇ ಇರುತ್ತವೆ. ಅದನ್ನು ಪ್ರತಿಮಾತ್ಮಕವಾಗಿ ಕಟ್ಟಿಕೊಡುವ ಕೆಲಸ ಪ್ರತಿಭಾವಂತ ಕವಿ ಮಾಡುತ್ತಾನೆ. ಕನ್ನಡದಲ್ಲಿ ಪುರಾಣ ಮತ್ತು ಚರಿತ್ರೆಯನ್ನು ವರ್ತಮಾನದೊಂದಿಗೆ ಸಮೀಕರಿಸಿ ಕಾವ್ಯ ಕಟ್ಟುವ ಪರಂಪರೆ ದೊಡ್ಡದಿದೆ. ಅದು ಪಂಪನಿಂದಲೇ ಆರಂಭವಾಯಿತು. ಅಲ್ಲಿಂದ ಪ್ರತಿ ಕಾಲಮಾನದ ಕವಿಯೂ ಅದರಿಂದ ಪ್ರೇರಿತನಾಗಿದ್ದಾನೆ. ಅಂತಹ ಸಾಕಷ್ಟು ಉದಾಹರಣೆಯನ್ನು ಸಾಹಿತ್ಯ ಚರಿತ್ರೆಯ ಹಿನ್ನೆಲೆಯಲ್ಲಿ ನೋಡಬಹುದು. ಈ ಸಂಕಲನದಲ್ಲಿ 'ಬಿಳಿದಾವರೆ' ಮತ್ತು 'ಬಿಳಿ ಪಾರಿವಾಳ' ಈ ಎರಡೂ ಕವಿತೆಗಳ ತಲೆಬರಹ ಮತ್ತು ಆಶಯ ಒಂದೇಯಾಗಿವೆ. ಒಂದು ಮಹಾಭಾರತದ ಕೊನೆಯ ಘಟ್ಟವಾದ ಕುರುಕ್ಷೇತ್ರದ ದಾರುಣ ಸ್ಥಿತಿ ಚಿತ್ರಿಸಿದರೆ, ಇನ್ನೊಂದು ಕಳಿಂಗ ಯುದ್ಧದಿಂದ

ಹಿಂಸೆಗೆ ಪಶ್ಚಾತ್ತಾಪ ಪಡುವ ಚಕ್ರವರ್ತಿ ಅಶೋಕ ಶಾಂತಿ ಸಾರುವ ಚಿತ್ರ ಅಪೂರ್ವವಾಗಿದೆ. ಆ ವಿಷಯ ಕುರಿತು ಅವನು ಎಷ್ಟು ಉತ್ಸುಕನಾಗಿದ್ದ, ಮಹತ್ವಾಕಾಂಕ್ಷೆ ಇಟ್ಟುಕೊಂಡಿದ್ದ ಎನ್ನುವುದಕ್ಕೆ ಅವನು ಕೆತ್ತಿಸಿದ ಶಾಸನಗಳೇ ಸಾಕ್ಷಿ.

'ಬಿಳಿದಾವರೆ' ಈ ಕವಿತೆಯು ವ್ಯಂಗ್ಯಾತ್ಮಕವಾಗಿದೆ. ಏಕೆಂದರೆ ಕವಿತೆ ಆರಂಭವಾಗುವುದೇ ಶಾಂತಿ ಬಯಕೆಯಿಂದ. ದುರ್ಯೋಧನನ ಸ್ವಾಭಿಮಾನ ಅಹಂಕಾರವಾಗಿ; ಅದು ಹಿಂಸೆಗೆ ತಿರುಗಿ, ಈಡೀ ಕುರುಕ್ಷೇತ್ರ ರಕ್ತ ಕೆಸರಿನಲ್ಲಿರುವಾಗ ಭೀಷ್ಮನ ಈ ಶಾಂತಿ ಸಂಧಾನವನ್ನು ಪಕ್ಕದಲ್ಲಿದ್ದ ಹೆಣಗಳು ವ್ಯಂಗ್ಯವಾಡುತ್ತವೆ.

"ಪಕ್ಕದಲಿ ಬಿದ್ದಿದ್ದ ಅರೆಸತ್ತ

ಹೆಣಗಳೆಲ್ಲ ಬಿದ್ದೆದ್ದು ನಗುತ್ತವೆ"೩

ಈ ವ್ಯಂಗ್ಯದ ಆಶಯವಿಷ್ಟೇ; ಹಿಂಸೆಯ ಭೀಕರತೆಯನ್ನು ಮೊದಲೇ ಸಂಧಾನದ ಮೂಲಕ ತಡೆಯಬಹುದಿತ್ತಲ್ಲವೇ? ಎನ್ನುವುದು. ಈ ಸಾಲುಗಳೇ ಕವಿತೆಯ ಶಕ್ತಿ. ಇದು ವರ್ತಮಾನದ ಭೀಕರತೆಯ ಉತ್ತರದಾಯಿತ್ವದಂತಿದೆ.

'ಬಿಳಿ ಪಾರಿವಾಳ' ಶಾಂತಿ ಸಂಧಾನದ ಸಂಕೇತ. ಸಹಜ ಕ್ಷತ್ರಿಯ ಮನೋಧರ್ಮದ, ಚಕ್ರವರ್ತಿಯ ಯುದ್ಧದ ಹಿಂಸೆಯ ಭಯಾನಕ ಸ್ವರೂಪ ಕೇವಲ ಎದುರಾಳಿಗಳಿಗಲ್ಲ ವಿಜಯ ಬಯಸಿದ್ದ ಸ್ವತಃ ಚಕ್ರವರ್ತಿಗೆ ಪಶ್ಚಾತ್ತಾಪವನ್ನು ಮೂಡಿಸುತ್ತದೆ. ಒಂದು ಯುದ್ಧಕ್ಕೆ ಇಷ್ಟೊಂದು ಸಾವು-ನೋವೇ? ಅದರಿಂದಲೇ ಮನಪರಿವರ್ತಿತನಾದ ಅಶೋಕನು ಬುದ್ಧ ಪಥದಲ್ಲಿ ನಡೆದ. ಆ ನಡೆ ನಾಳೆಯ ಬದುಕಿನ ಸೊಗಸಾಗಿತ್ತು. ಅವನ ಆ ಮಹತ್ವಾಕಾಂಕ್ಷೆಯ ಕುರುಹು ಇವತ್ತಿಗೂ ಸಾಕ್ಷಿಯಾಗಿದೆ.

"ಅಗೋ ನೋಡಿ
ಕಂಪಿಸುವ ಬೋಗನೆಯಲಿ
ರಕ್ತ ಸಿಕ್ತ ಬಿಳಿ ಪಾರಿವಾಳ
ಹಿಡಿದು ಹೊರಟಿದ್ದಾನೆ ಅಶೋಕ
ಪಶ್ಚಾತ್ತಾಪದ
ಚಕ್ರದ ಮೇಲೆ ನಿಂತು ಪುಟ"೪

ಅಶೋಕನ ನಿರ್ಧಾರದ ಪರಿಣಾಮದಿಂದಾದ ಬೆಳವಣಿಗೆಯನ್ನು ಕಟ್ಟಿಕೊಡುವುದು ಹೀಗೆ-

"ಹಾಗಂತಲೇ
ಪಾರಿವಾಳಗಳ
ಡವಗುಡವ ಎದೆಯ ಗೂಡಲ್ಲಿ
ನಿಟ್ಟುಸಿರ ಗಾಳಿಯಿದೆ
ರೆಂಬೆಕೊಂಬೆಗಳ ಕೊರಳಿಗೆ

ಜೋತು ಬಿದ್ದ ಗೂಡುಗಳಿವೆ
ಗಾಳಿಯಲ್ಲಿ ತೇಲಿ ನರ್ತಿಸುವ ಕನಸಿದೆ"೫

ಈ ಬಗೆಯ ಬದಲಾವಣೆಯನ್ನು ಸಾಂಕೇತಿಕವಾಗಿ ಸೂಚಿಸುವ ಕವಿತೆಯಲ್ಲಿ ಜನಪದರ ಹೇಳಿಕೆಯ ಮಾದರಿಯ ಸಾಲುಗಳನ್ನು ಈ ಕವಿತೆಯಲ್ಲಿ ನೋಡಬಹುದು. ನಾಲ್ಕೇ ನಾಲ್ಕು ಸಾಲುಗಳಿದ್ದರೂ ಗಟ್ಟಿಯಾದ ನಿಗೂಡಾರ್ಥವನ್ನೇ ಹೊಂದಿವೆ. ಈ ಬಗೆಯ ತನ್ನ ಲಯಗಾರಿಕೆಯಿಂದ ಗಮನ ಸೆಳೆಯುತ್ತದೆಂದು ಹೇಳಬಹುದು. ಉದಾಹರಣೆಗೆ-

"ಬೀಜವೊಡೆಯಿತ್ತು
ಮೊಳಕೆ ಚಿಗುರಿತ್ತು
ಹಬ್ಬ ಹರಡಿತ್ತು
ಶಾಂತಿವಲ್ಲರಿ"೬

'ಒಂದು ವ(ಂ)ಚನ' ಕವಿತೆಯು ವಿಭಿನ್ನ ಮಾದರಿಯ ಕವಿತೆಯಾಗಿದೆ. ಭಕ್ತಿಯ ಪರಕಾಷ್ಠೆ ಮತ್ತು ಆತ್ಮವಿಮರ್ಶೆ ಈ ಕವಿತೆಯ ಎರಡು ಗುಣಗಳಾಗಿವೆ. ಮೊದಲ ಎರಡು ಮತ್ತು ಮಧ್ಯದಲ್ಲಿಯ ಕೆಲವು ಸ್ಟಾಂಜಾಗಳು ಶುದ್ಧ ವಚನಗಳಂತೆ ಭಾಸವಾಗುತ್ತವೆ. ಹಾಗೆ ಕೆಲವು ಸಾಲು ಬೇಂದ್ರೆಯವರನ್ನು ನೆನಪಿಸುತ್ತವೆ. ಆದರೆ ಮೂರನೇ ಸ್ಟಾಂಜಾವು ವಾಸ್ತವವಾದಿ ನೆಲೆಯಲ್ಲಿ ಕಾಣುತ್ತದೆ. ಜೇಡರ ದಾಸಿಮಯ್ಯ, ಅಲ್ಲಮ, ಬಸವ, ಅಕ್ಕಮಹಾದೇವಿ ಮುಂತಾದವರ ವಚನ ನೆನಪಿಸುವ ಈ ಕವಿತೆಯ ಮೇಲೆ ವಚನಗಳ ಪ್ರಭಾವವಿರುವುದು ಮನವರಿಕೆಯಾಗುತ್ತದೆ. ಈ ಕವಿತೆಯ ಹೆಚ್ಚುಗಾರಿಕೆಯೆಂದರೆ ಭಕ್ತಿ ಹಾಗೂ ಆತ್ಮವಿಮರ್ಶೆ. ಈ ಆತ್ಮವಿಮರ್ಶೆಯು ಮನದಲ್ಲಿಯೇ ಇರುತ್ತದೆ. ನಿಜ. ಆದರೆ ಇದು ಕಾವ್ಯಾತ್ಮಕವಾಗಿ ನಿಲ್ಲುತ್ತದೆ. ಆ ಕಾರಣಕ್ಕಾಗಿ ಮುಖ್ಯವೆನಿಸುತ್ತದೆ. ಒಂದು ವಚನ ಶೈಲಿ ಇನ್ನೊಂದು ಆಧುನಿಕ ಕಾವ್ಯದ ಶೈಲಿ ಈ ಎರಡನ್ನು ಒಂದೇ ಕವಿತೆಯಲ್ಲಿ ಸಮ್ಮಿಳನಗೊಂಡಿದೆ.

ಹಾಗೆ ನೋಡಿದರೆ ಇದೊಂದು ರಾಜಕೀಯ ಕವಿತೆ. ರಾಜಕೀಯ ಕವಿತೆ ಎನ್ನುವ ಸುಳಿವು ಕೊಡದೆ ಓದುಗನಿಗೆ ಬೇರೆಯದೇ ಅರ್ಥವನ್ನು ಹೊಳೆಯುವಂತೆ ಮಾಡುತ್ತದೆ. ಈ ಶತಮಾನದ ಆರಂಭದ ದಶಕದ ಕರ್ನಾಟಕ ರಾಜಕಾರಣವನ್ನು ಗಮನಿಸಿದರೇ ರಾಜಕಾರಣಿಗಳ ಗಣಿಗಾರಿಕೆಯ ಸ್ವರೂಪ ಗೊತ್ತಾಗುತ್ತದೆ. 'ಸೈಕಲ್‌ಗೆ ಮೆತ್ತಿರೋ ದೂಳು' ಆ ಕಾಲಮಾನದ ಚಲನೆಯ ಸ್ಥಗಿತತೆಯನ್ನು ಸೂಚಿಸುತ್ತದೆ. ಇದು ಇನ್ನೊಂದು ಅರ್ಥ ಕೊಡುತ್ತದೆ. ಆತ್ಮವಿಮರ್ಶೆಯಿಂದ ಕೊನೆಗೊಳ್ಳುವ ಸಾಲು ಒಬ್ಬ ರಾಜಕಾರಣಿಯ ಪಶ್ಚಾತ್ತಾಪ ಸೂಚಿಸದೆ ಸಾರ್ವತ್ರಿಕಗೊಳ್ಳುವುದನ್ನು ಕಾಣುತ್ತದೆ. ಏಕೆಂದರೆ ರಾಜಕಾರಣಿಗಳಿಗೆ ಎಲ್ಲಿಯ ಆತ್ಮವಿಮರ್ಶೆ ಮತ್ತು ಪಶ್ಚಾತ್ತಾಪ ಬರಲು ಸಾಧ್ಯ?

"ಸೈಕಲ್ ತುಳಿತುಳಿದು
ಬೀದಿ ಅಲೆದವನು ನಾನು
ಇಲ್ಲಿ ರಣಬಿಸಿಲ ಝಳಕ್ಕೆ
ಮಣ್ಣೆಲ್ಲ ಧೂಳು ಸೈಕಲ್ ಚಲನೆಗೂ
ಮೈಯೆಲ್ಲ ಧೂಳು ಧೂಳು"೭

ಈ ಕವಿತೆಯ ಆಶಯ ಕಾಯುವವನೇ ಧ್ವಂಸಕನಾಗುವುದನ್ನು ಧ್ವನಿಸುತ್ತದೆ. ಗಣಿಧಣಿಯು ರಾಜಕಾರಣಿಯೂ ಆದಾಗ ಆಗುವ ಅಪಾಯವನ್ನು ಕವಿ ಬಹಳ ಎಚ್ಚರಿಕೆಯಿಂದ ವಚನ ಮತ್ತು ಕಾವ್ಯಾತ್ಮಕ ಶೈಲಿಯಲ್ಲಿ ಹೇಳುವನು. ಆ ಕಾರಣದಿಂದಲೇ ಇಲ್ಲಿ ಭಕ್ತಿ ಹಾಗೂ ಆತ್ಮವಿಮರ್ಶೆ ಕಾಣುತ್ತದೆ. ಆ ಮೂಲಕ ಸಾರ್ವತ್ರಿಕಗೊಳ್ಳುತ್ತದೆ.

"ಧಣಿಯಾಗುವ ಸಡಗರದಲ್ಲಿ

ಗಣಿ ತೋಡಿದ ನಾನು

ನನ್ನದೇ ಗೋರಿ ತೋಡಿಕೊಂಡ

ಪರಿಯ ಅರಿಯದೆ ಹೋದೆ

ಗೋರಿಗೊಲ್ಲರ ದೇವಾ!"೮

'ಬಯಲು ಬಂಧಿಯಾಗಿತ್ತು ಮನೆಯೊಳಗೆ' ಕವಿತೆಯು ಪ್ರತಿಮಾತ್ಮಕವಾಗಿದೆ. ಲೌಕಿಕ ಮತ್ತು ಅಲೌಕಿಕ ತಾತ್ವಿಕತೆಯನ್ನು ಮನೆ ಮತ್ತು ಬಯಲು ಎರಡು ಸಂಕೇತಗಳನೊಳಗೊAಡಿದೆ. ಮನೆಯೊಳಗಿನ ಕುತೂಹಲ ಸಹಜ. ಬಯಲಿಗೆ ಬಂದಾಗ ತಾಳ್ಮೆ, ತ್ಯಾಗ ಮತ್ತು ಕಠೋರ ನಿರ್ಧಾರ ಮುಖ್ಯವಾಗುತ್ತದೆ. ಕೇವಲ ಕುತೂಹಲಕ್ಕೆ ಬಯಲು ದಕ್ಕಲಾರದು. ಮನೆಯೊಳಗೆ ಬಯಲು ಆಹ್ವಾನಿಸಿಕೊಳ್ಳುವುದು ಒಂದು ಬಗೆ. ಅದು ಸರಳವೂ ಹೌದು, ಕಷ್ಟವೂ ಹೌದು. ಆದರೆ ಸಂಸಾರಿಗಳಿಗೆ ಮನೆ ಮುಖ್ಯ. ಅದರ ಕೇಂದ್ರದಲ್ಲಿಯೇ ಕಾಯಕದೊಂದಿಗೆ ಕೈಲಾಸ ಧ್ಯಾನಿಸಬಹುದು. ಮನೆ ಮತ್ತು ಬಯಲು ಪರಿಕಲ್ಪನೆಯ ಒಟ್ಟು ಧ್ವನಿ ಈ ಅಂಶಗಳನ್ನೇ ಸಾರುವಂತಿವೆ.

'ನೀಲಕAಠನ ನೆರಳು' ಕವಿತೆಯಲ್ಲಿ 'ನೀಲಕಂಠ' ನಮ್ಮ ಪುರಾಣದಲ್ಲಿ ಶಿವ ರಾಕ್ಷಸ ಮತ್ತು ದೇವತೆಗಳ ಮಧ್ಯ ಸಮುದ್ರ ಮಂಥನ ಮಾಡುವಾಗ ವಿಷ ನುಂಗಿದ ಕಥೆ ನೆನಪಿಸುತ್ತದೆ. ಈ ಕವಿತೆಯಲ್ಲಿ ಪೌರ್ವಾತ್ಯ ವಿಚಾರಧಾರೆಯ ಪ್ರತಿಪಾದನೆಯಿದೆ. ನಾವು ಸ್ವತಂತ್ರವಾದರೂ ಇನ್ನೂ ಪಾಶ್ಚಿಮಾತ್ಯ ವಿಚಾರಗಳಿಂದ ಬಿಡಿಸಿಕೊಳ್ಳಲಾಗಿಲ್ಲ. ಪೌರ್ವಾತ್ಯ ವಿಚಾರ ಸ್ವೀಕರಿಸಿ ಮುನ್ನೆಲೆಗೆ ತರುವುದು ಪ್ರಯಾಸವಾದಂತಿದೆ. ಅದುವೇ ಮುಖ್ಯವೆನ್ನುವ ಭಾವ ಇಲ್ಲಿಯದು. ಆಫ್ರಿಕನ್ ಕಪ್ಪು ಸಾಹಿತ್ಯಕ್ಕೆ 'ಕಪ್ಪು'ತನವೇ ಶ್ರೇಷ್ಠತೆಯ ಸಂಕೇತವಾದAತೆ ಪೌರ್ವಾತ್ಯರಾದ ನಮಗೂ ನಮ್ಮ ತನವೇ ಶ್ರೇಷ್ಠ ಎನ್ನುವ ಆಶಯ ಇಲ್ಲಿಯದು. ಆರಂಭದಲ್ಲಿ ನಿರಾಶೆಯಿದ್ದರೂ ಆಶಾದಾಯಕವಾಗಿ ಕೊನೆಗೊಳ್ಳುತ್ತದೆ.

"ಹೊತ್ತು ಬಾಗಿದ ಸಮಯ

ಪೂರ್ವ ದಿಕ್ಕಿನ ಕಡೆ ಮುಖ ಮಾಡಿ ಹೊರಟಿದ್ದಾನೆ ನೀಲಕಂಠ

ಹಾದಿ ತಪ್ಪಿದ ಮಗುವಿನ ಹಾಗೆ"೯

"ಬೆರಳ ಸಂಧಿಯಲೀಗ

ಹೊನ್ನ ಕಿರಣಗಳ ಲೀಲೆ"೧೦

'ಟೂ ಥೌಜಂಡ ಟೂ' ಇದು ಕಾಲದ ಚಲನೆಯ ಸ್ವರೂಪವನ್ನು ಬಿಂಬಿಸುವ ಕವಿತೆ. ಹಳೆ ಮತ್ತು ಹೊಸ ಕಾಲಗಳ ವೈರುಧ್ಯಗಳನ್ನು ಚಿತ್ರಿಸುವ ಕವಿತೆ ಕಾಲ ಬದಲಾಗುತ್ತಿದ್ದರೂ ಮನುಷ್ಯನಲ್ಲಿಯ ಹಿಂಸಾತ್ಮಕ ದಾಳಿಕೋರತನ ನಿಲ್ಲುತ್ತಿಲ್ಲ ಎನ್ನುವ ವಿಷಾದ ಮಡುಗಟ್ಟಿದೆ. ಹಾಗಂತ ಹೊಸತನಕ್ಕೆ ವಿರೋಧವಿಲ್ಲ. ಆದರೆ ಶಾಂತಿಗಾಗಿ ಸ್ವಾಗತ ಕೋರುವ ಆಶಯ ಅಷ್ಟೇ. ಇದು ಜಾಗತಿಕ ಹಿಂಸಾತ್ಮಕ ಅಂಶಗಳನ್ನು ಚಿತ್ರಿಸುವ ಕವಿತೆಯಾದರೂ ಭಾರತದ ಪಾಲಿಗೆ ಕರಾಳತೆಯನ್ನು ತುಂಬಿದ ಅಂಶವನ್ನು ನೆನಪಿಸುತ್ತದೆ. ಭಾರತದ ಸಂಸತ ಭವನದ ಮೇಲಿನ ದಾಳಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಛಿದ್ರಗೊಳಿಸುವುದೇ ಆಗಿದೆ. ಕ್ರಾಂತಿ ಮತ್ತು ಶಾಂತಿಯ ಕನಸು ಕಾಣುವಾಗಲೇ ಈ ದಾಳಿ ನಡೆಯುತ್ತದೆ. ಈ ಗಾಯ ಮಾಯುವ ಮುನ್ನ ಹೊಸ ವರುಷ ಬರುತ್ತದೆ. ಅದನ್ನು ಹೇಗೆ ಸಂಭ್ರಮಿಸುವುದು? ಎಂದು ಕವಿ ಮರುಕ ಪಡುತ್ತಿದ್ದಾನೆ. ಬಹುತೇಕರು ಎಲ್ಲವೂ ಮರೆತು ಸಂಭ್ರಮಿಸುವಾಗ ಹಳೆಯದನ್ನು ನೆನೆಯುವುದು ಅಪಹಾಸ್ಯವಾಗುತ್ತದೆ ಎಂದು ಕವಿ ಮರುಕ ಪಡುವನು.

"ಕಪ್ಪು ಟಾರು ರಸ್ತೆಯ ಮೇಲೆ

ಬಿಳಿ ವಾರ್ನಿಷ ಅಕ್ಷರಗಳು

ಹರುಷದಿಂದ ಹೇಳುತ್ತವೆ

ಸ್ವಾಗತವು ನಿನಗೆ

ಟೂ ಥೌಜಂಡ ಟೂ"೧೧

"ಗುಂಡುಗಳ ವಾಸನೆ ಕರಗುವ

ಮುನ್ನವೇ ಹೊಸ ಕನಸುಗಳ ಹೊತ್ತು

ಬಂದೇ ಬಿಡುತ್ತದೆ

ಟೂ ಥೌಜಂಡ ಟೂ"೧೨

ಇದು ಸಶಕ್ತ ಪ್ರತಿಮೆಯನ್ನೊಳಗೊಂಡ ವಿಶ್ವಾತ್ಮಕ ಕವಿತೆಯಾಗಿದೆಂದು ಹೇಳಬಹುದು.

'ಅವರು ಸುಮ್ಮನೆ ಹೋಗಲಿಲ್ಲ' ಕವಿತೆಯಲ್ಲಿ ದಲಿತ ಬಂಡಾಯ ಸಾಹಿತ್ಯದ ತಾತ್ವಿಕತೆಯನ್ನು ಕಾಣಬಹುದು. ಮಹಾಕುತಂತ್ರಿಗಳಾದ ಬ್ರಿಟಿಷರು ಭಾರತವನ್ನು ಸುಮ್ಮನೆ ಬಿಟ್ಟು ಹೋಗಲಿಲ್ಲ. ಒಡೆದು ಆಳುವ ನೀತಿ ಅನುಸರಿಸಿ ಧರ್ಮ ಹಾಗೂ ಜಾತಿಯ ವಿಷ ಬೀಜವನ್ನು ಬಿತ್ತಿ ಹೋದರು ಎನ್ನುವ ಕವಿತೆಯಲ್ಲಿ ವಿಷಾದ ತುಂಬಿದ ವ್ಯಂಗ್ಯವನ್ನು ಕಾಣಬಹುದು. 'ಬಾರಕ್ಕ ಗುಬ್ಬಕ್ಕ ನೋಡಲ್ಲಿ ಹೊಳೆವ ಗನ್ನು',...

"ನಳಿಕೆ ತುಂಬ ನರಳಿಕೆಯ ಜನ

ತಮ್ಮವೇ ಕೈ ಕಾಲು ಹೊಟ್ಟೆ ಮೂಗು ಕಣ್ಣು ಕಿವಿಯ

ತಮ್ಮ ಬಾಯಿಂದಲೇ ತಿಂದು

ತಮ್ಮ ಹೊಟ್ಟೆಯ ಮೇಲೆ ಕೈಯಾಡಿಸಿ ಡೇಗುವ

ವಿಸ್ಮಯವ ಕಂಡು ಹಣ್ಣ ತಿನ್ನದೆ ಗುಬ್ಬಿ

ಎದೆಯೊಡೆದು ಕೆಳಗೆ ಬೀಳುತ್ತದೆ

ಬಿತ್ತಿ ಹೋದವರು ದೂರದಲ್ಲಿ ನಿಂತು ಮುಗುಳು ನಗುತ್ತಾರೆ"೧೩

ಬ್ರಿಟಿಷರು ಒಡಕನ್ನು ಬಿತ್ತುವುದರೊಂದಿಗೆ ನೆಲ, ಜಲ, ಪಕ್ಷಿ ಒಟ್ಟು ಜೀವ ರಾಶಿಗಳಿಗೆ ವಿಷ ಬೆರಸಿದರು ಎನ್ನುವ ಸಂಕಟ ಹಾಗೂ ಪ್ರತಿರೋಧವನ್ನು ವ್ಯಕ್ತಪಡಿಸುತ್ತದೆ.

'ಸೂರ್ಯನಿಗೆ ಸಾವ ನೋಡಲು ಬೇಸರವಿಲ್ಲ' ಕವಿತೆಯು ಸಂವಾದಾತ್ಮಕ ಮತ್ತು ಸಮೃದ್ಧ ಫಲ ಭರಿತ ಮರದಂತೆ ರೂಪಕ, ಪ್ರತಿಮೆಗಳಿಂದ ಗಮನ ಸೆಳೆಯುತ್ತದೆ. ಮನುಷ್ಯನ ಅಂತರಂಗ ಮತ್ತು ಬಹಿರಂಗದ ಕಲುಷಿತತನ ಆತ್ಮವಂಚನೆ, ಆಷಾಢಭೂತಿ ಗುಣಗಳನ್ನು ಕಲಾತ್ಮಕವಾಗಿ ಚಿತ್ರಿಸಿರುವ ಕವಿತೆಯಿದು. ಮುಖ್ಯವಾಗಿ ಪ್ರಕೃತಿ ಮತ್ತು ಕಾಲ ಎಲ್ಲವನ್ನು ಸಹಿಸಿಕೊಳ್ಳುತ್ತದೆ. ಸ್ವೀಕರಿಸುತ್ತದೆ. ಚಲನೆಯನ್ನು ಕಳೆದುಕೊಂಡ ಕಲುಷಿತವನ್ನು ಪಕ್ಕಕ್ಕೆ ತಳ್ಳಿ ನಡೆದುಬಿಡುತ್ತದೆ. ಇದು ಕಾಲ ಹಾಗೂ ಪ್ರಕೃತಿಯ ನಿಜ ಧರ್ಮವಾಗಿದೆ.

'ಹಲಸಂಗಿ ಹಡಗು' ಮಧುರ ಚೆನ್ನರ ಪೂರ್ವರಂಗ, ಕಾಳರಾತ್ರಿ, ಬೆಳಗಿನ ಘನಸಿರಿಯ ಮೈತ್ರಿಯಾಗದ ಅನುಭಾವಿಕ ಸಾಧನೆಯ ಪಯಣವನ್ನು ಚಿತ್ರಿಸುವ ಕವಿತೆ. 'ಹೀಗೊಂದು ಸಂ-ವಾದ' ಕವಿತೆಯು ದಾಸ್ಯದ ದಾರಿದ್ರ್ಯವನ್ನು ಧಿಕ್ಕರಿಸಿ, ಚಲನೆಯ ದಿಕ್ಕಿಗೆ ಹಕ್ಕಿಯಂತೆ ಹಾರಲು ಅಕ್ಷರದ ಬೆಳಕು ಮುಖ್ಯವೆನ್ನುವ ಅಂಬೇಡ್ಕರ್‌ರ ಜೀವನ ಗಾಥೆಯೊಂದಿಗೆ, ಅವರ ಅರಿವಿನ ಬೆಳಕನ್ನು ಹೃದಯದಿಂದ ಹೃದಯಕ್ಕೆ ಸಾಗಿಸುವ ಕವಿತೆಯಿದು.

ಈ ಸಂಕಲನದಲ್ಲಿ ಸಾಕಷ್ಟು ಗಮನಸೆಳೆಯುವ ಕವಿತೆಗಳಿವೆ. ಉದಾಹರಣೆಗೆ- 'ನೀಲಾಂಜನ', 'ಅಪ್ಪ', 'ಅವ್ವ', 'ನೀವೂ ಬನ್ನಿರಿ ನನ್ನ ಜೊತೆಗೆ', 'ಒಬ್ಬ ಇನ್ನೊಬ್ಬ', 'ಪುಟ್ಟದೊಂದು ಕಥೆ', 'ನೋವು ಬಿದ್ದಿತ್ತು ನೋಯ್ಯುತ್ತ', 'ಆತ್ಮಸಾಕ್ಷಿ' ಹಾಗೂ 'ದಿಲ್ವಾಲೆ ದುಲ್ಹನಿಯಾ ಲೇ ಜಾಯೆಂಗೆ' ಸಾಮಾಜಿಕ ಅಂಶದಿಂದ ಮುಖ್ಯವಾಗುತ್ತದೆ.

ಒಟ್ಟಾರೆ ಈ ಸಂಕಲನದ ಹೆಚ್ಚುಗಾರಿಕೆಯೆಂದರೆ ದಲಿತ-ಬಂಡಾಯದ ತಾತ್ವಿಕತೆ, ನವ್ಯದ ಪ್ರತಿಮಾ ಕೌಶಲ್ಯ, ವಚನದ ಅನುಭಾವಿಕ ನಿಲುವೆನ್ನಬಹುದು. ಭಾಷೆ, ವಸ್ತು, ಲಯ, ಶೈಲಿ ಸಮರ್ಥವಾಗಿ ದುಡಿಸಿಕೊಂಡಿರುವ ಸಂಕಲನ. ಕವಿತೆಯ ರಚನೆ ಮತ್ತು ಪ್ರಕಟಣೆಯಾದ ಕಾಲದ ಮಧ್ಯ ಅಂತರವಿರುವುದರಿಂದ ಸಹೃದಯರಿಗೆ ಸಂವಹನಗೊಳ್ಳಲು ಸ್ವಲ್ಪ ತೊಡಕಾದರೂ ಗಂಭೀರ ಅಧ್ಯಯನಶೀಲರಿಗೆ ಈ ಸಂಕಲನವೂ ಈ ಮೇಲಿನ ಅಂಶಗಳಿಂದ ಮುಖ್ಯವಾಗುತ್ತದೆ. ಕಾಲದ ಬಗೆಗಿನ ಎಚ್ಚರಿಕೆ ಮತ್ತು ಕುತೂಹಲ ಕೂಡ ಗಮನ ಸೆಳೆಯುವ ಅಂಶಗಳಾಗಿವೆಯೆಂದು ಹೇಳಬಹುದು.

**ಕೊನೆ ಟಿಪ್ಪಣಿಗಳು:-**

೧) ಸೂರ್ಯನಿಗೆ ಸಾವ ನೋಡಲು ಬೇಸರವಿಲ್ಲ- ಪುಟ-I

೨) ಅದೇ ಪುಟ-x

೩) ಅದೇ ಪುಟ-೨

೪) ಅದೇ ಪುಟ-೩

೫) ಅದೇ ಪುಟ-೪

೬) ಅದೇ ಪುಟ-೩&೪

೭) ಅದೇ ಪುಟ-೫&೬

೮) ಅದೇ ಪುಟ-೭

೯) ಅದೇ ಪುಟ-೧೪

೧೦) ಅದೇ ಪುಟ-೧೬

೧೧) ಅದೇ ಪುಟ-೧೭

೧೨) ಅದೇ ಪುಟ-೧೯

೧೩) ಅದೇ ಪುಟ-೨೭

**ಆಧಾರ ಗ್ರಂಥಗಳು:**

೧) ಚನ್ನಪ್ಪ ಕಟ್ಟಿ- ಸೂರ್ಯನಿಗೆ ಸಾವ ನೋಡಲು ಬೇಸರವಿಲ್ಲ- ನೆಲೆ ಪ್ರಕಾಶನ ಸಿಂದಗಿ-೨೦೧೬.

**ಪರಾಮರ್ಶನ ಗ್ರಂಥಗಳು:**

೧) ಗುರುನಾಥ ಅರಳಗುಂಡಗಿ (ಸಂ)- ಚನ್ನಪ್ಪ ಕಟ್ಟಿ ಸಾಹಿತ್ಯ: ಅನುಸಂಧಾನ- ನೆಲೆ ಪ್ರಕಾಶನ-೨೦೨೦

೨) ಸರಜೂ ಕಾಟ್ಕರ್ (ಸಂ)- ಕನ್ನಡ ಬಂಡಾಯ ಸಾಹಿತ್ಯ- ಕೇಂದ್ರ ಸಾಹಿತ್ಯ ಅಕಾಡೆಮಿ ನವದೆಹಲಿ-೨೦೧೨

೩) ಪುರುಷೋತ್ತಮ ಬಿಳಿಮಲೆ- ಬಂಡಾಯ ದಲಿತ ಚಳುವಳಿ ಮತ್ತು ಸಾಹಿತ್ಯ- ಅಭಿನವ ಬೆಂಗಳೂರು-೨೦೧೭